ಆಗಿರುವುದಿಲ್ಲ. ಈ ವಿಷಯವನ್ನು ನಾನು ಕಳೆದ ೩ ಬಾರಿ ಬಜೆಟ್ ಅಧಿವೇಶನಗಳ ಸಮಯದಲ್ಲಿ ಮಾನ್ಯ ಲೋಕೋಪಯೋಗಿ ಸಚಿವರ ಗಮನಕ್ಕೆ ತಂದಾಗ ೩ ಬಾರಿಯೂ ಸಹ ಈ ರಸ್ತೆಗಳನ್ನು ವಿಶೇಷ ಆದ್ಯತೆಯ ಮೇಲೆ ಈ ವರ್ಷವೇ ತಾರು ಹಾಕಿಸಿ ಕೊಡುವುದಾಗಿ ಭರವಸೆ ನೀಡಿದ್ದರು. ಆದರೆ ಈವರೆಗೆ ತಾರು ಹಾಕಿಸಲಿಲ್ಲ. ಆ ರಸ್ತೆಗಳು ತಾರು ಕಾಣಬಹುದೆಂಬ ನನ್ನ ಆಸೆ ದಿನೇ ದಿನೇ ಕಡಿಮೆಯಾಗುತ್ತಿದೆ. ಆದುದರಿಂದ ಈ ವರ್ಷವೇ ಆ ರಸ್ತೆಗಳ ಉಳಿದ ಭಾಗಗಳಿಗೆ ತಾರನ್ನು ಹಾಕಿಸಿ ಧೂಳನ್ನು ತಿನ್ನುತ್ತಿರುವ ಜನರ ಮನಸ್ಸಿಗೆ ನೆಮ್ಮದಿ ತರಬೇಕೆಂದು ಮಾನ್ಯ ಸಚಿವರನ್ನು ನಿಮ್ಮ ಮೂಲಕ ಒತ್ತಾಯಿಸಂತ್ತೇನೆ.

ಶ್ರೀ ಎಂ ರಘುಪತಿ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಗಮನಕ್ಕೆ ತಂದ ವಿಚಾರವನ್ನು ಲೋಕೋಪಯೋಗಿ ಸಚಿವರಿಗೆ ತಿಳಿಸಿ ಉತ್ತರವನ್ನು ತರಿಸಿಕೊಡುತ್ತೇನೆ.

೫. ಜಮಖಿಂಡಿ ತಾಲ್ಲೂಕಿನ ಚಿಕ್ಕಪಡಸಲಗಿ ವಡ್ಡು ಕಟ್ಟುವ ಕೆಲಸದ ಬಗ್ಗೆ

ಶ್ರೀ ಬಿ, ಎಸ್. ಯಮೂಡಿಯೂರಪ್ಪ.—ಜಿಜಾಪುರ ಜಿಲ್ಲೆ ಜಮಖಿಂಡಿ ತಾಲ್ಲೂಕಿನ ''ಚಿಕ್ಕಪಡಸಲಗಿ'' ಗ್ರಾಮದ ಮತ್ತು ಇತರೆ ಗ್ರಾಮದ ಜೃತರೈತರಿಂದ ೪೦ ಲಕ್ಷ ಸಂಗ್ರಹ ಮಾಡಿ ಮತ್ತು ಬ್ಯಾಂಕಿನಿಂದ ರೈತರು ೨೦ ಲಕ್ಷ ಸಾಲ ಮಾಡಿ ''ಚಿಕ್ಕಪಡಸಲಗಿ ವಡ್ಡು'' ಕಟ್ಟುವ ಕೆಲಸ ಸಂಪೂರ್ಣ ಒಂದು ಕೋಟಿ ಅಂದಾಜಿನಲ್ಲಿ ಸರ್ಕಾರದ ಅನುಮತಿ ಪಡೆದು ಈಗಾಗಲೆ ೨೦ ಲಕ್ಷ ಖರ್ಚು ಮಾಡಿ ಕೆಲಸ ಪ್ರಾರಂಭಿಸಿದ್ದಾರೆ.

ಈ ವಡ್ಡು ಕಟ್ಟುವುದರಿಂದ ಸುತ್ತಮುತ್ತಲ ಅನೇಕ ಗ್ರಾಮಗಳಿಗೆ ಕುಡಿಯುವ ನೀರಿನ ಅನುಕೂಲವಾಗುವುದರಿಂದ—ಸರ್ಕಾರ ಕೊನೆಯ ಪಕ್ಷ ರೈತರ ಪರಿಸ್ಥಿತಿ ಅರಿತುಕೊಂಡು, ಈ ವಡ್ಡಿನ ಕೆಲಸ ಪೂರ್ಣಮಾಡಲು ೨೫ ಲಕ್ಷ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಬೇಕೆಂಬ ವಿಷಯದ ಬಗ್ಗೆ ಸರ್ಕಾರದ ಹೇಳಿಕೆ ತಿಳಿಯಬಯಸುತ್ತೇನೆ.

ಶ್ರೀ ಎಂ. ರಘುಪತಿ. - ಮಾನ್ಯ ಸದಸ್ಯರಿಗೆ ಸಂಬಂಧಪಟ್ಟ ಮಂತ್ರಿಯವರಿಂದ ನಾಳೆ ಉತ್ತರವನ್ನು ತರಿಸಿಕೊಡುತ್ತೇನೆ.

೬. ಗುಲ್ಬರ್ಗ ಜಿಲ್ಲೆಯಲ್ಲಿ ನೀರಿನ ಅಭಾವ ಜಾಸ್ತಿಯಾಗುತ್ತಿರುವುದು

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್.—ಗುಲ್ಬರ್ಗ ಜಿಲ್ಲೆಯಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಬಿಸಿಲಿನಿಂದ ಅನೇಕ ಗ್ರಾಮಗಳಲ್ಲಿ ನೀರಿನ ಅಭಾವ ಹೆಚ್ಚಾಗುತ್ತಿದ್ದು, ಅಲ್ಲಿಯ ಜಿಲ್ಲಾಪರಿಷತ್ ಇಂಜಿನೀಯರ್‌ಗಳಿಗೆ ಪಿ.ಎಚ್.ಇ. ಕೆಲಸಗಳನ್ನು ವಹಿಸಿಕೊಂಡಿದ್ದು, ನಮ್ಮ ಕ್ಷೇತ್ರದ ಇಂಜಿನೀಯರುಗಳು ಸರಿಯಾಗಿ ಕಾಳಜಿ ವಹಿಸದೆ, ಕೆಲಸಗಳಲ್ಲಿ ವಿಳಂಬ ಮಾಡುತ್ತಿರುವುದರಿಂದ, ಗ್ರಾಮಗಳಲ್ಲಿನ ನೀರಿನ ಪರಿಸ್ಥಿತಿ ಹಾನಿಗುಂಟಾಗಿದೆ. ಈ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲು ಜಿಲ್ಲಾ ಪರಿಷತ್ತಿನ ಕಾರ್ಯದರ್ಶಿಯವರಿಗೆ ಹಲವಾರು ಬಾರಿ ಮಂಡಲ ಪಂಚಾಯತಿ ಪ್ರಧಾನರು ಮತ್ತು ತಾಲ್ಲೂಕು ಸಮಿತಿಯಿಂದ ಪಿರ್ಯಾದು ಕೊಟ್ಟರೂ, ಇವರಿಗೆ ಯಾರ ಭಯವೂ ಇಲ್ಲ. ತಾವು ಕೂಡಲೇ ಈ ಇಂಜನೀಯರ್‌ಗಳ ಮೇಲೆ ಕ್ರಮ ತೆಗೆದುಕೊಂಡು ಈ ಸಮಸ್ಯೆಗೆ. ಉಡಾಗಿರುವ, ಆತನೂರು, ನೀಲೂರು, ತೆಲ್ಲೂರು, ಸಾಗನೂರು, ಬೈರಾಮದಗಿ, ದೇವಲಗಾಣಗಾಪೂರ್, ಮೇಳಕುಂಡಾ, ಬಿ. ಸಾವಳಗಿ, ರೈಲ್ವೆಸ್ಟೇಶನ್ ಗ್ರಾಮಗಳ ನೀರಿನ ಅನುಕೂಲ ಆದಷ್ಟು ಬೇಗ ಮಾಡಿಸಿಕೊಡಲು ಸರ್ಕಾರ ಕಾಳಜಿ ವಹಿಸಬೇಕಾಗಿ ಈ ಮೂಲಕ ತಿಳಿಯ ಪಡಿಸಂತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರಿಗೆ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ತರಿಸಿ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ, ೩೫ ಜನ ಮಂತ್ರಿಗಳಿದ್ದಾರೆ ಇಲ್ಲಿ ನಾಲ್ಕು ಜನ ಮಂತ್ರಿಗಳಿದ್ದಾರೆ. ನಾವು ಏನು ಕೇಳಿದರೂ ಕೂಡ ಉತ್ತರ ತರಿಸಿಕೊಡುತ್ತೇನೆಂದು ಹೇಳುತ್ತಾರೆ. ಈ ರೀತಿ ಮಾಡುವುದಾದರೆ ನಾವು ಏಕೆ ಕೇಳಬೇಕು. ನಾವು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರಬೇಕ. ಸಾಧ್ಯವಾದಷ್ಟು ಅದರ ಬಗ್ಗೆ ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳಬೇಕು ಎಂದು ನಾವು

ಇಲ್ಲಿ ಪ್ರಸ್ತಾಪ ಮಾಡುತ್ತೇವೆ. ಆ ಖಾತೆಗಳ ಮಂತ್ರಿಗಳು ಇಲ್ಲಿ ಇದ್ದರೆ ಒಳ್ಳೆಯದೆಂದು. ಈಗ ೪ ಜನ ಮಂತ್ರಿಗಳು ಮಾತ್ರ ಇಲ್ಲಿ ಇದ್ದಾರೆ. ನಾವು ಹೇಳುವುದಕ್ಕೆ ಏನು ಬೆಲೆ ಇದೆ.

ಉಪಾಧ್ಯಕ್ಷರು.—ಉತ್ತರ ತರಿಸಿ ಕೊಡುತ್ತಾರೆ.

ಶ್ರೀ ಎಂ. ರಘುಪತಿ.—ಮಾನ್ಯ ಖರ್ಗೆಯವರು ಹೇಳಿದ್ದನ್ನು ನಾನೂ ಕೂಡ ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ —ಮಾನ್ಯ ಮಂತ್ರಿಗಳು ಇಲ್ಲದಿದ್ದರೆ ಆಮೇಲೆ ಉತ್ತರವನ್ನು ಕಳುಹಿಸಿಕೊಡಬೇಕು. ೪-೫ ದಿವಸಗಳಿಂದ ನಿಯಮ ೫೫ರ ಮೇಲೆ ಪ್ರಸ್ತಾಪ ಮಾಡಿದ್ದಕ್ಕೆ ಉತ್ತರ ಕೊಡಿಸುತ್ತೇವೆಂದು ಹೇಳುತ್ತಲಿದ್ದಾರೆ, ಆದರೆ ಉತ್ತರ ಮಾತ್ರ ಬರುತ್ತಿಲ್ಲ ಕೊನೇಯ ಪಕ್ಷ ಸಂಬಂಧಪಟ್ಟ ಅಧಿಕಾರಿಗಳಿಗೆ ಇದನ್ನು ಕಳುಹಿಸಿ ಕ್ರಮ ತೆಗೆದುಕೊಳ್ಳುವುದೂ ಆಗಿಲ್ಲ. ಮುಂದಿನ ದಿನವಾದರೂ ಉತ್ತರಗಳನ್ನು ಕಳುಹಿಸಿ ಕೊಡುವ ವ್ಯವಸ್ಥೆ ಮಾಡಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಹಿಂದಿನ ಸದನದಲ್ಲಿ ಪ್ರಸ್ತಾಪ ಮಾಡಿದ್ದಕ್ಕೂ ಕೂಡ ಉತ್ತರ ಬಂದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ—ಇಲ್ಲಿ ನಾಲ್ಕು ಜನ ಮಂತ್ರಿಗಳಿದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಉಪಾಧ್ಯಕ್ಷರು.—ಉತ್ತರವನ್ನು ತರಿಸಿಕೊಡಿ.

ಶ್ರೀ ಎಸ್. ಬಂಗಾರಪ್ಪ.—ಬಹಳ ಜವಾಬ್ದಾರಿಯಿಂದ ಹೇಳುತ್ತೀರಿ ಉತ್ತರ ತರಿಸಿಕೊಡುತ್ತೇವೆಂದು ಮುಂದೆ ಕೂಡ ಹಾಗೆ ಹೇಳುತ್ತೀರಿ, ಈ ಹಿಂದೆ ಕೂಡ ಹೇಳಿದ್ದಿರಿ. ಆದರಲ್ಲೂ ಮಾನ್ಯ ಲಕ್ಷ್ಮೀಸಾಗರ್‌ರವರು ಬಹಳ ಚೆನ್ನಾಗಿ ಹೇಳುತ್ತಾರೆ, ನಾವೂ ಕೂಡ ಕೇಳುತ್ತಲೇ ಇದ್ದೇವೆ. ಒಟ್ಟಿನಲ್ಲಿ ಹೇಳುವುದಾದರೆ ೩೫ರ ಹಣೆಬರವೇ ಅಷ್ಟು. ಮೇಲ್ಮನೆಯಲ್ಲಿ ಮಂತ್ರಿಗಳು ಇದ್ದಾರೆಂದು ಹೇಳುತ್ತೀರಿ ೩೫ ಜನ ಮಂತ್ರಿಗಳು ಇದ್ದೀರಿ. ಎಷ್ಟು ಜನ ಇಲ್ಲಿ ಇದ್ದೀರಿ, ಎಂದು ನಿಮ್ಮ ಬಾಯಿಂದ ಬಂದರೆ ಚೆನ್ನಾಗಿರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೩೫ ಜನರಲ್ಲಿ ಮೂರು ಜನರಾದರೂ ಇರುತ್ತಾರೆ ಇಲ್ಲವೇ, ಐದು ಜನರಾದರೂ ಇರುತ್ತಾರೆ.

ಉಪಾಧ್ಯಕ್ಷರು.—ತಾವು ಹೇಳಿದ ಹಾಗೆ, ಉತ್ತರ ತರಿಸಿಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮೇಲ್ಮನೆಯಲ್ಲಿ ಸಚಿವರುಗಳು ಇದ್ದಾರೆಂದು ಹೇಳುತ್ತಾರೆ. ತತ್‌ಕ್ಷಣ ಒಂದು ಸಣ್ಣ ಸದನ ಸಮಿತಿಯನ್ನು ಮಾಡಿ ಆ ಸದನಕ್ಕೆ ಅವರು ಹೋದರೆ ಆಗ ಗೊತ್ತಾಗುತ್ತದೆ ಅಲ್ಲಿ ಎಷ್ಟು ಜನ ಮಂತ್ರಿಗಳು ಇದ್ದಾರೆಂದು. ಇಲ್ಲಿ ೪-೫ ಜನ ಇದ್ದರೆ ಅಲ್ಲಿ ೨೮-೨೯ ಜನ ಮಂತ್ರಿಗಳಾದರೂ ಇರಬೇಕು. ಅದನ್ನು ಚೆಕ್ ಮಾಡಿಬಿಡೋಣ.

(ಗೊಂದಲ)

ಶ್ರೀ ವೈ. ಕೆ. ರಾಮಯ್ಯ.—ಸನ್ಮಾನ್ಯ ಸದಸ್ಯರು ನಾವು ಎಲ್ಲಾ ಪಕೀಲಿಗಿರಿ ಮಾಡಿ ಬಂದರೂ ಅವರಿಗೂ ಕೂಡ ಎಲ್ಲಾ ಗೊತ್ತಿದೆ.